ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಬ್ರಹ್ಮಾವರ ಕ್ಷೇತ್ರ (ಕುಂದಾಪುರ ಅರಣ್ಯ ವಿಭಾಗ)

| ವರ್ಷ | ಪ್ರಕರಣ | ಶ್ರೀಗಂಧ (ಕೆ.ಜಿ) | ಮೌಲ್ಯ (ರೂ.) |
|---|---|---|---|
| 2001–02 | 06 | 88.00 | 26,400.00 |
| 2002–03 | 05 | 183.24 | 54,972.00 |
| 2003–04 | 06 | 167.90 | 50,370.00 |
| 2004–05 | 02 | 30.36 | 9,108.00 |

ಆ) ಶ್ರೀಗಂಧದ ಕಳ್ಳತನ ತಡೆಯುವ ಕ್ರಮವಾಗಿ ಅಧೀನ ಸಿಬ್ಬಂದಿಗಳನ್ನು ಚುರುಕುಗೊಳಿಸಿದೆ. ಕಳ್ಳತನವೇ ಹಾವ್ಯಾಸವಾಗಿರುವ ಕೆಲವೊಂದು ವರ್ಗದ ಜನರನ್ನು ಕಣ್ಗಾವಲಿನಿಂದ ನೋಡಲಾಗುತ್ತಿದ್ದು, ಶ್ರೀಗಂಧದ ಮರಗಳ್ಳತನವನ್ನು ತಡೆಯುವ ಕ್ರಮ ಕೈಗೊಂಡಿದೆ ಹಾಗೂ ಇಂತಹ ಮೊಕದ್ದಮೆಗಳು ಕಂಡುಬಂದಲ್ಲಿ ತಕ್ಷೀರು ದಾಖಲಿಸಿದ್ದು, ಆಪಾದಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

...

325 (684) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ, ಹಾಗೂ ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಕಟ್ಟಡ ಇಲ್ಲದಿರುವ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ತೀರಾ ಹಿಂದುಳಿದ ಪ್ರದೇಶದ ಈ ಭಾಗದ ವಿದ್ಯಾರ್ಥಿಗಳು ಈ ಸರ್ಕಾರಿ ಪ್ರೌಢಶಾಲೆಗಳನ್ನು ಮತ್ತು ಕಿರಿಯ ಕಾಲೇಜುಗಳನ್ನು ಅವಲಂಬಿಸಿರುವುದರಿಂದ ಸರ್ಕಾರ ಈ ಸಾಲಿನಲ್ಲಿ ಹೊಸ ಕಟ್ಟಡಗಳನ್ನು ಮಂಜೂರು ಮಾಡುವುದೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕಿನ ಎಲ್ಲಾ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿರುತ್ತದೆ. ಎನ್.ಆರ್.ಪುರ ತಾಲ್ಲೂಕಿನ ಬಾಳೆಹೊನ್ನೂರು ಸರ್ಕಾರಿ ಪ್ರೌಢಶಾಲೆಗೆ ಸ್ವಂತ ಕಟ್ಟಡ ಇರುವುದಿಲ್ಲ.

ಆ) ನಬಾರ್ಡ್‌ನ ಆರ್ಥಿಕ ನೆರವಿನ ಆರ್.ಐ.ಡಿ.ಎಫ್.9 ರಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಪ್ಪ ಮತ್ತು ಶೃಂಗೇರಿ ಶಾಲೆಗಳಿಗೆ ಕ್ರಮವಾಗಿ ಎರಡು ಕೊಠಡಿಗಳು, ಮತ್ತು ಒಂದು ಕೊಠಡಿಯನ್ನು ಮಂಜೂರು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಒದಗಿಸಿಕೊಳ್ಳಲಾಗಿದ್ದು ನಬಾರ್ಡ್‌ನ ಅನುಮೋದನೆ ದೊರೆತ ನಂತರ ಕೊಠಡಿ ನಿರ್ಮಾಣ ಕಾರ್ಯವನ್ನು ಕೈಗೆತ್ತಿ ಕೊಳ್ಳಲಾಗುವುದು.

...

327 (706) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?